ದಿನಾಂಕಃ 06.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:**

ನಾನು ಪ್ರಸ್ತುತ ದಾವಾವನ್ನು ಸ.ನಂ.217, 218 ಮತ್ತು 222 ಕ್ಕೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ. ಸ.ನಂ.218 ರ ಸ.ನಂ. ನಲ್ಲಿ ಒಟ್ಟು 2 ಎಕರೆ ಜಮೀನಿದ್ದು, ಅದು ಗೋಣೀಬೀಡು ಹೋಬಳಿಯ ವೈಸಳಲು ಗ್ರಾಮದಲ್ಲಿ ಇರುತ್ತದೆ, ಸದರಿ ಜಮೀನಿನ ಚೆಕ್ಕುಬಂದಿಯು ಪೂರ್ವಕ್ಕೆ ಹೆಚ್.ಇ. ದುಗ್ಗೇಗೌಡ ರವರ ಜಮೀನು, ಪಶ್ಚಿಮಕ್ಕೆ ಮಂಜಯ್ಯ ರವರ ಜಮೀನು, ಉತ್ತರಕ್ಕೆ ಶಿಪಣಿ ಎಸ್ಟೇಟ್ ಮತ್ತು ದಕ್ಷಿಣಕ್ಕೆ ಬಾಸಯ್ಯ ರವರ ಜಮೀನಿರುತ್ತದೆ. ಸ.ನಂ.217 ರ ಸ.ನಂ. ನಲ್ಲಿ ಒಟ್ಟು 4 ಎಕರೆ ಜಮೀನಿದ್ದು, ಅದು ಗೋಣೀಬೀಡು ಹೋಬಳಿಯ ವೈಸಳಲು ಗ್ರಾಮದಲ್ಲಿ ಇರುತ್ತದೆ, ಸದರಿ ಜಮೀನಿನ ಚೆಕ್ಕುಬಂದಿಯು ಪೂರ್ವಕ್ಕೆ ಜಿಲಾನಿ ಎಸ್ಟೇಟ್, ಪಶ್ಚಿಮಕ್ಕೆ ರಾಮಯ್ಯ ರವರ ಜಮೀನು, ಉತ್ತರಕ್ಕೆ ಮಂಜಯ್ಯ ರವರ ಜಮೀನು ಮತ್ತು ದಕ್ಷಿಣಕ್ಕೆ ದುಗ್ಗಯ್ಯ ರವರ ಜಮೀನಿರುತ್ತದೆ. ಸ.ನಂ.222 ರ ಸ.ನಂ. ನಲ್ಲಿ ಒಟ್ಟು 4 ಎಕರೆ ಜಮೀನಿದ್ದು, ಅದು ಗೋಣೀಬೀಡು ಹೋಬಳಿಯ ವೈಸಳಲು ಗ್ರಾಮದಲ್ಲಿ ಇರುತ್ತದೆ, ಸದರಿ ಜಮೀನಿನ ಚೆಕ್ಕುಬಂದಿಯು ಪೂರ್ವಕ್ಕೆ ನನ್ನದೇ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಜಮೀನು, ಉತ್ತರಕ್ಕೆ ಜಿಲಾನಿ ಎಸ್ಟೇಟ್ ಮತ್ತು ದಕ್ಷಿಣಕ್ಕೆ ಮಂಜಯ್ಯ ರವರ ಜಮೀನಿರುತ್ತದೆ. ಸದರಿ ಎಲ್ಲಾ ಸ್ವತ್ತುಗಳು ಒಂದೇ ಗಡಿಯನ್ನು ಹೊಂದಿರುತ್ತದೆ.

ಸದರಿ ಜಮೀನುಗಳಲ್ಲಿ ನಾನು ಚಿಗುರು ಗೂಟ ನೆಟ್ಟು ಬೇಲಿ ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. ಮೇಲೆ ತಿಳಿಸಿದ 3 ಜಮೀನುಗಳನ್ನು ನಾನು ಹರಾಜು ಪ್ರಕ್ರಿಯೆಯಲ್ಲಿ ಖರೀದಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ಸ.ನಂ.217 ಮತ್ತು 222 ರ ಜಮೀನನ್ನು ಈ ನ್ಯಾಯಾಲಯದ ಹರಾಜು ಪ್ರಕ್ರಿಯೆಯಲ್ಲಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸ.ನಂ.218 ರ ಜಮೀನನ್ನು ಉಪ ನೊಂದಣಾಧಿಕಾರಿಯವರ ಹರಾಜು ಪ್ರಕ್ರಿಯೆಯಲ್ಲಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸ.ನಂ.119 ರಲ್ಲಿ ಸುಮಾರು 15 ಕುಟುಂಬಳಿಗೆ ಜಮೀನು ಮಂಜೂರಾಗಿರುವ ವಿಷಯ ನನಗೆ ತಿಳಿದಿರುವುದಿಲ್ಲ. ನನಗೆ 15 ಕುಟುಂಬಗಳಿಗೆ ಜಮೀನು ಮಂಜೂರಾಗಿರುವ ಕುರಿತು ಮಾಹಿತಿ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡಿ.ಎಮ್. ಭವಾನಿ ನನ್ನ ತಾಯಿ. ಸದರಿಯವರಿಗೆ ಸ.ನಂ.119 ರಲ್ಲಿ 4 ಎಕರೆ 38 ಗುಂಟೆ ಜಮೀನಿರುತ್ತದೆ. ಎನ್.ಎಮ್. ಧರಿಣಿ ನನ್ನ ಪತ್ನಿ. ಸದರಿಯವರಿಗೆ 1 ಎಕರೆ 6 ಗುಂಟೆ ಜಮೀನಿದ್ದು ಆದರೆ ಕಾರಣಾಂತರಗಳಿಂದ ಅದು ರದ್ದಾಗಿರುತ್ತದೆ. ಸದರಿಯವರ ಹೆಸರಿನಲ್ಲಿ ಇದ್ದ ಜಮೀನು ರದ್ದಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಒಟ್ಟು ಕುಟುಂಬದಲ್ಲಿ ಸ.ನಂ.119 ರಲ್ಲಿ ಒಟ್ಟು 19 ಎಕರೆ ಜಮೀನನ್ನು ಹೊಂದಿರುತ್ತೇವೆ.

ಸ.ನಂ.119 ರ ಜಮೀನನ್ನು 4 ನೇ ಪ್ರತಿವಾದಿಯವರ ಆದೇಶದ ಮುಖಾಂತರ ಭೂ ಮಾಪಕರು ಅಳತೆ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ವರದಿಯ ಪ್ರಕಾರ

ನಾನು 17 ಗುಂಟೆ ಜಮೀನನ್ನು ಹೆಚ್ಚುವರಿಯಾಗಿ ಒತ್ತುವರಿ ಮಾಡಿರುತ್ತೇನೆ ಎಂದು ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗವನ್ನು ತೆರವುಗೊಳಿಸುವಂತೆ 4 ನೇ ಪ್ರತಿವಾದಿಯವರು ನೋಟೀಸನ್ನು ಜಾರಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸ್ ಗೆ ಪ್ರತ್ಯುತ್ತರ ನೀಡಿದ್ದೀರ ಎಂದರೆ ಸಾಕ್ಷಿಯು 4 ನೇ ಪ್ರತಿವಾದಿಯು ಸ್ಥಳಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. 17 ಗುಂಟೆ ಜಾಗವನ್ನು ತೆರವುಗೊಳಿಸಬೇಕಾಗುತ್ತದೆ ಎಂಬ ಕಾರಣದಿಂದ ನಾನು ಪ್ರಸ್ತುತ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ತಿಳಿಸಿದ ಒಟ್ಟು 3 ದಾವಾ ಸ್ವತ್ತಿನ ಚೆಕ್ಕುಬಂದಿಯು ಪೂರ್ವಕ್ಕೆ ಜಿಲಾನಿ ಎಸ್ಟೇಟ್, ಪಶ್ಚಿಮಕ್ಕೆ ನನಗೆ ಸೇರಿದ ಸ.ನಂ.134 ರ ಜಮೀನು, ಉತ್ತರಕ್ಕೆ ಹೆಚ್.ಎಮ್. ಉಮೇಶ್ ಎಂಬುವವರಿಗೆ ಸೇರಿದ ಜಮೀನು ಮತ್ತು ದಕ್ಷಿಣಕ್ಕೆ ಸ.ನಂ.119 ರ ಉಳಿಕೆ ಜಾಗ. ನಾನು ಮೇಲೆ ತಿಳಿಸಿದ ಪ್ರತ್ಯೇಕ ಸ.ನಂ. ಗಳ ಚೆಕ್ಕುಬಂದಿ ಮತ್ತು ಒಟ್ಟು ಜಮೀನಿನ ಚೆಕ್ಕುಬಂದಿಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಮತ್ತು ಸದರಿ ಚೆಕ್ಕುಬಂದಿಯು ಸುಳ್ಳು ಎಂದರೆ ಸರಿಯಲ್ಲ.

ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಮತ್ತು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ದಾದವೆಯನ್ನು ಸರ್ಕಾರದಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಮತ್ತು 1 ರಿಂದ 4 ನೇ ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.